**ದಿನಾಂಕಃ 03.02.2026 ರಂದು ಸಾಕ್ಷಿದಾರರನ್ನು ಕರೆಸಿ ಪ್ರಮಾಣವಚನ ಬೋಧಿಸಲಾಯಿತು.**

**ಪಾಟೀ ಸವಾಲು 2ನೇ ಎದುರದಾರರ ಪರ ವಕೀಲರಿಂದಃ**

ನನ್ನ ತಂದೆ ಹೆಸರು ಅರ್ಜಿ ಶಿರ್ಷಿಕೆಯಲ್ಲಿ ತಪ್ಪಾಗಿ ನಮೂದಾಗಿರುತ್ತದೆ. ನನಗೆ ಮದುವೆ ಆಗಿ 15 ವರ್ಷ ಆಗಿದೆ. ಮದುವೆ ಆದ ನಂತರ ನನ್ನ ಗಂಡನ ಮನೆಯಲ್ಲಿ ವಾಸ ಮಾಡುತ್ತಿದ್ದೇನೆ. ಈಗಲೂ ಅಲ್ಲೇ ವಾಸ ಮಾಡುತ್ತಿದ್ದೇನೆ. ಮನೆಯ ಸಂಪೂರ್ಣ ಖರ್ಚು ವೆಚ್ಚ ನನ್ನ ಗಂಡ ನೋಡಿಕೊಳ್ಳುತ್ತಾರೆಂದರೆ ಸರಿ. ಹಿಗಾಗಿ ಮದುವೆ ಆದ ನಂತರದಿಂದ ನಮ್ಮ ತಂದೆ ನೋಡುತ್ತಿರಲಿಲ್ಲ ಎಂದರೆ ಸರಿ. ನನ್ನ ತಂದೆ-ತಾಯಿ ರಾಮನಗರ ತಾಲ್ಲೂಕಿನಲ್ಲಿ ವಾಸ ಮಾಡುತ್ತಿದ್ದರು. ಈಗಲೂ ನನ್ನ ತಾಯಿ ಅಲ್ಲೇ ವಾಸ ಮಾಡುತ್ತಾರೆ. ನನ್ನ ತಂದೆ ತೀರಿಕೊಂಡ ನಂತರ ನನ್ನ ಗಂಡ ದೂರು ನೀಡಿದ್ದರು ಎಂದರೆ ಸರಿ. ದೂರಿನಲ್ಲಿ ನನ್ನ ತಂದೆಗೆ 71 ವರ್ಷ ವಯಸ್ಸು ಎಂದು ನಮೂದು ಆಗಿರುತ್ತದೆ ಎಂದರೆ ಸರಿ. ಪಿ ಎಂ ವರದಿಯಲ್ಲಿ ನನ್ನ ತಂದೆಗೆ 71 ವರ್ಷ ವಯಸ್ಸು ಎಂದು ನಮೂದು ಆಗಿರುತ್ತದೆ ಎಂದರೆ ಅಷ್ಟು ಆಗಿರಲಿಲ್ಲ. ಪೋಲಿಸರು ಅಪಘಾತಕ್ಕೆ ಸಂಬಂಧಪಟ್ಟಂತೆ ಹೇಳಿಕೆ ಮಾಡಿಕೊಂಡಿರಲಿಲ್ಲ. ನನ್ನ ಗಂಡ ಕೊಟ್ಟಿರುತ್ತಾರೆ. ನನ್ನ ತಂದೆಯ ವಯಸ್ಸು ತೋರಿಸುವ ದಾಖಲೆ ಹಾಜರುಪಡಿಸಿದ್ದೇನೆ. ಸದರಿ ಯಾವುದೇ ದಾಖಲೆಗಳನ್ನು ಹಾಜರುಪಡಿಸದೇ ಇರುವುದರಿಂದ ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಸ್ಥಳ ಮಹಜರ್ ಹಾಗೂ ಕಚ್ಚಾ ನಕಾಶೆ ಹಾಜರುಪಡಿಸಿಲ್ಲ ಎಂದರೆ ಗೊತ್ತಿಲ್ಲ.

ಸದರಿ ಕೇಸು ಹಾಕಲು ಮಾಹಿತಿಯನ್ನು ಹಾಗೂ ನನ್ನ ಸೇರಿ ಕೊಟ್ಟಿರುತ್ತೇವೆ. ನನ್ನ ತಾಯಿಗೆ ಕೇಸಿನ ಬಗ್ಗೆ ಮಾಹಿತಿ ಇಲ್ಲ ಎಂದರೆ ಸರಿಯಲ್ಲ. ನನ್ನ ತಂದೆ ವ್ಯವಸಾಯ ಮಾಡಿಕೊಂಡು ಆದಾಯ ಗಳಿಸುತ್ತಿದ್ದರು ಎನ್ನುವುದಕ್ಕೆ ಯಾವುದೇ ದಾಖಲೆ ಹಾಜರುಪಡಿಸಿಲ್ಲ. ನನ್ನ ತಂದೆ ಹಸು ಸಾಕಾಣಿಕೆ ಮಾಡಿಕೊಂಡು ಇದ್ದರು ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ನನ್ನ ತಂದೆಗೆ ಆದಾಯ ಬರುತ್ತಿತ್ತು ಎಂದು ತೋರಿಸಲು ಯಾವುದೇ ದಾಖಲೆ ಹಾಜರುಪಡಿಸಿಲ್ಲ. ಹಾಲನ್ನು ಡೈರಿಗೆ ಹಾಕುತ್ತಿದ್ದರು. ಈ ಸಂಬಂಧ ಡೈರಿನವರು ಕೊಟ್ಟಂತಹ ರಶೀದಿಯನ್ನು ಮುಂದೆ ಹಾಜರುಪಡಿಸುತ್ತೇನೆ. ನನ್ನ ತಂದೆ ಯಾವುದೇ ಆದಾಯ ಇರಲಿಲ್ಲ ಹಿಗಾಗಿ ದಾಖಲೆ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ.

ಅಪಘಾತಪಡಿಸಿದ ಚಾಲಕನ ಹೆಸರು ನನಗೆ ಗೊತ್ತಿಲ್ಲ. ಅಪಘಾತ ಮಾಡಿದ ವಾಹನದ ಮಾಲೀಕ ಯಾರು ಎಂದು ನನಗೆ ಗೊತ್ತಿಲ್ಲ.

**ಮುಂದುವರೆದ ಪಾಟೀ ಸವಾಲಿಗೆ ಸಮಯ ಅವಕಾಶ ಕೋರಿದ್ದರಿಂದ ಸಮಯ ಅವಕಾಶ ನೀಡಲಾಗಿದೆ.**

**(ನನ್ನ ಉಕ್ತಲೇಖನದ ರೀತ್ಯಾ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸರಿ ಇದೆ**

**4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು**
**ದೊಡ್ಡಬಳ್ಳಾಪುರ**